

# ಒಂದು ಅಮೆರಿಕನ್ ಗ್ರಹಣಾನುಭವ

**ನಿಜವಾದ ಅದ್ಭುತವೆನ್ನುವುದು ವರ್ಣನೆಗೆ ಮೀರಿದ್ದು, ಅನುಭವಕ್ಕೆ ಮಾತ್ರ ದಕ್ಕುವಂತಹದ್ದು. ಎಂಥ ಕಾವ್ಯಾತ್ಮಕ ಶಬ್ದಾಲಂಕಾರ, ವರ್ಣರಂಜಿತ ವೀಡಿಯೋಗಳೂ, ಗಗನದ ನಡುವೆ ಕಂಗೊಳಿಸುವ ಸೂರ್ಯನ ಪ್ರಭಾವಳಿಯ ವೃತ್ತಕ್ಕೆ ನ್ಯಾಯ ಒದಗಿಸಲಾರವು.**

**■ ಸಂಜಯ ಹಾವನೂರ**
ಚಿತ್ರಗಳು: ನಿರ್ಮಲಾ ಬೀಳಗಿ

ಇತ್ತೀಚೆಗೆ ಆಗಸ್ಟ್ 21ರಂದು ಅಮೆರಿಕಾ ದೇಶದಲ್ಲಿ ಸಂಪೂರ್ಣ ಸೂರ್ಯಗ್ರಹಣವೊಂದು ಘಟಿಸಿತು. ಅಂಥಿಂಥ ಘಟನೆಯಲ್ಲ. ಅಮೆರಿಕಾ–ದವರು ಏನು ಮಾಡಿದರೂ ದೊಡ್ಡದಾಗಿಯೇ ಮಾಡುತ್ತಾರೆ. ಇದೂ ಅಷ್ಟೇ. ಪಶ್ಚಿಮ ಕರಾವಳಿಯ ಮೇಲ್ತುದಿಯಲ್ಲಿ ಬರುವ ಒರೆಗಾನ್ ರಾಜ್ಯದಿಂದ ಪೂರ್ವ ಕರಾವಳಿಯ ಕೆರೋಲಿನಾದ ವರೆಗೆ ಸುಮಾರು 4500 ಕಿಮೀ ಉದ್ದ, ಕಾಶ್ಮೀರದಿಂದ ಕನ್ಯಾಕುಮಾರಿಯಲ್ಲ – ಶ್ರೀಲಂಕಾದ ಇನ್ನೊಂದು ತುದಿಗೆ ಹೋಗುವಷ್ಟು, ಮತ್ತು ನೂರು ಕಿಮೀ ಅಗಲವಾದ ಪಟ್ಟಿ. ಅದರ ಕೇಂದ್ರದಲ್ಲಿ ನಿಂತವರಿಗೆ ಎರಡು ನಿಮಿಷಗಳ ಕಾಲ ಸಂಪೂರ್ಣ ಗ್ರಹಣದ ಅನುಭವ.

ದೇಶದ ದಡದಿಂದ ದಡಕ್ಕೆ ಚಾಚುವಂಥ ವ್ಯಾಪಕ ಗ್ರಹಣ ಅಮೆರಿಕದಲ್ಲಿ ಈ ಮೊದಲು 1918ರಲ್ಲಿ ಆಗಿತ್ತು. 99 ವರ್ಷಗಳ ದೀರ್ಘಾವಧಿಯ ನಂತರ, ಅದೂ ಅಂತರ್ಜಾಲದ ಯುಗದಲ್ಲಿ ಕೇಳಬೇಕೆ? ಗ್ರಹಣದ ದಾರಿಯಲ್ಲಿ ಹಲವಾರು ದೊಡ್ಡ ಊರುಗಳು, ಅದರ ಪ್ರಭಾವಲಯದಲ್ಲಿ ಕೋಟ್ಯಾಂತರ ಜನರು. ಸಂಪೂರ್ಣ ಗ್ರಹಣದ ಪೀಡಾ ನಿವಾರಣೆಗೆ ಅಮೆರಿಕನ್ನರು ಏನು ಮಾಡಿದರು? ಬೆಳಿಗ್ಗೆ ಇಗರ್ಜಿಗಳಿಗೆ ಹೋಗಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ಉಪವಾಸ ಮಾಡಿ, ದಾನ ಧರ್ಮ, ರಾಶಿ ಫಲ, ಹೆಂಗಸರು ಮಕ್ಕಳು, ಅದರಲ್ಲಿಯೂ ಗರ್ಭಿಣಿಯರು ಕಟ್ಟುನಿಟ್ಟಾಗಿ ಭ್ರೂಣಕ್ಕೆ ವಿಕಿರಣ ತಾಕದಂತೆ ನೆಲಮಾಳಿಗೆಯಲ್ಲಿ...

ಎಂಥದೂ ಇಲ್ಲ. ದೇಶಕ್ಕೆ ದೇಶವೇ ಸಂಭ್ರಮದಿಂದ ಹಬ್ಬ ಆಚರಿಸಿತು!

ಅಮೆರಿಕದಲ್ಲಿ ಅವಿವೇಕಗಳಿಗೆ ಅಭಾವವಿಲ್ಲ. ಆದರೆ ಮೌಢ್ಯಗಳಿಗೆ ಮುಕುಟಪ್ರಾಯವಾದ ಫಲಜ್ಯೋತಿಷ್ಯ ಅವುಗಳಲ್ಲಿ ಈಗ ಸೇರಿಲ್ಲ ಎನ್ನುವುದು ಸಂತಸದ ಸಂಗತಿ. ಕೋಟಿಗಟ್ಟಲೆ ಜನರು ಊರಿಂದೂರಿಗೆ ಪ್ರಯಾಣ ಮಾಡಿ ಆಕಾಶದ ಆದ್ಭುತವನ್ನು ಅನುಭವಿಸಿದರು. ವಯೋಮಿಂಗ್ ಎಂಬ ರಾಜ್ಯದಲ್ಲಿ ಎಣಿಸಿದರೆ ಆರು ಲಕ್ಷ ಜನವಸತಿ ಇಲ್ಲ. ಆಗಸ್ಟ್ 21ರಂದು ಅದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಗ್ರಹಣಾರ್ಥಿಗಳು ಜಮಾಯಿಸಿ ಒಂದು ದಿನದ ಮಟ್ಟಿಗೆ ರಾಜ್ಯದ ಜನಸಂಖ್ಯೆ ದುಪ್ಪಟ್ಟಾಯಿತಂತೆ! ಗ್ರಹಣದ ದಾರಿಗುಂಟ ಹಲವಾರು ಸಂಗೀತೋತ್ಸವಗಳು, ಶಿಬಿರಗಳು, ಏನೂ ಬೇಡ ಮೂರು ದಿನ ಪಿಕ್‌ನಿಕ್ ಮಾಡಿ ತಿಂದು ಕುಡಿದು ಕುಣಿದು ಲಕ್ಷಾಂತರ ಜನ ಆನಂದಿಸಿದರು. ಬಾಹ್ಯಾಕಾಶ ಇಲಾಖೆಯವರೂ ಮುಂದೆ ಬಂದು ಉದ್ದಕ್ಕೂ ಶೈಕ್ಷಣಿಕ